ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 06–02–2017

## ಪತ್ರಿಕಾ ಆಮಂತ್ರಣ

1. ದಡಾರ ಮತ್ತು ರುಬೆಲ್ಲಾ ಚುಚ್ಚುಮದ್ದಿನ ಕಾರ್ಯಕ್ರಮ:
   ಉದ್ಘಾಟನೆ:
   ತನ್ವೀರ್ ಸೇಠ್,
   ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು
   ದಿನಾಂಕ: 7–2–2017 ಮಂಗಳವಾರ ಸಮಯ: ಬೆಳಿಗ್ಗೆ 8–30 ಗಂಟೆಗೆ
   ಸ್ಥಳ: ಭಾರತ್ ಸೇವಾದಳ ಶಾಲೆ ಆವರಣ, ಕುಮಾರಕೃಪ ರಸ್ತೆ, ಬೆಂಗಳೂರು –560001

## ಪತ್ರಿಕಾ ಪ್ರಕಟಣೆ

## ಕೆ.ಆರ್.ಎಸ್. ದೀಪಾಲಂಕಾರ ವೇಳೆ

ಬೆಂಗಳೂರು, ಫೆಬ್ರವರಿ 6, (ಕರ್ನಾಟಕ ವಾರ್ತೆ)

ಕೃಷ್ಣರಾಜಸಾಗರ ಬೃಂದಾವನ ಉದ್ಯಾನವನಕ್ಕೆ ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ಎಂದಿನಂತೆ ವಾರದ ಎಲ್ಲಾ ದಿನಗಳಲ್ಲಿ ಪ್ರವೇಶವನ್ನು ಕಲ್ಪಿಸಲಾಗಿದೆ.

ದೀಪಾಲಂಕಾರದ ವೇಳೆಯು ದಿನಾಂಕ 01–02–2017 ರಿಂದ 30–9–2017 ರವರೆಗೆ ಸೋಮವಾರದಿಂದ ಶುಕ್ರವಾರದವರೆಗೆ 19.00 ಗಂಟೆಯಿಂದ 20.00 ಗಂಟೆಯವರೆಗೆ, ಶನಿವಾರ ಮತ್ತು ಭಾನುವಾರಗಳಂದು 19.00 ಗಂಟೆಯಿಂದ 21.00 ಗಂಟೆಯವರೆಗೆ.

ದೀಪಾಲಂಕಾರದ ವೇಳೆಯು ಮುಗಿಯುವುದಕ್ಕೆ ಅರ್ಧ ಗಂಟೆ ಮುಂಚಿತವಾಗಿ ಪ್ರವಾಸಿಗರಿಗೆ ಪ್ರವೇಶವನ್ನು ನಿಷೇದಿಸಲ್ಪಟ್ಟಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ಕೃಷ್ಣರಾಜಸಾಗರ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## K.R.S. Illumination Timings

**Bangalore, February 6 (Karnataka Information)**

**Entrance to Brindavan Garden at K.R. Sagara for Tourists, Visitors and for public will be allowed as usual on all the week days. The Illumination timings with effect from 01/02/2017 to 30/09/2017 are as follows. Monday to Friday 19.00 hours to 20.00 on Saturday and Sunday 19.00 hours to 21.00 hours. The entry to the public or visitors to Brindavan Garden will be stopped half an hour to the closing hours of Illumination timings, says a press release issued by Executive Engineer, C.N.N. K.R.S. Division, K.R. Sagara.**

## ಅಗಲಿದ ಗಣ್ಯರಿಗೆ ವಿಧಾನಸಭೆಯಲ್ಲಿ ಸಂತಾಪ

ಬೆಂಗಳೂರು, ಫೆಬ್ರವರಿ 6, (ಕರ್ನಾಟಕ ವಾರ್ತೆ)

ರಾಜ್ಯ ವಿಧಾನಮಂಡಲದ ಅಧಿವೇಶನದ ಮೊದಲ ದಿನವಾದ ಇಂದು ರಾಜ್ಯ ವಿಧಾನಸಭೆಯಲ್ಲಿ ಇತ್ತೀಚೆಗೆ ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ಪ್ರಾರಂಭಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಚಿವ ಹೆಚ್.ಎಸ್. ಮಹದೇವಪ್ರಸಾದ್ ಅವರ ನಿಧನದಿಂದ ತಮಗೆ ವೈಯಕ್ತಿಕವಾಗಿ ಅಪಾರ ನಷ್ಟ ಉಂಟಾಗಿದ್ದು ಅವರ ಸಾವು ಅತ್ಯಂತ ಆಘಾತ, ದಿಗ್ಭ್ರಮೆ ಮತ್ತು ನೋವು ಉಂಟುಮಾಡಿದೆ ಎಂದು ತಿಳಿಸಿದರು.

ಸರಳ ಸಜ್ಜನ, ಪ್ರಾಮಾಣಿಕ ವ್ಯಕ್ತಿಯಾಗಿದ್ದಂತಹ ಹೆಚ್.ಎಸ್. ಮಹದೇವಪ್ರಸಾದ್ ಅವರು ಅಜಾತಶತ್ರುವಾಗಿದ್ದು ಸರಳ, ಸಜ್ಜನ, ಪ್ರಾಮಾಣಿಕತೆಗೆ ಹೆಸರಾಗಿದ್ದರು ಎಂದು ಈ ಸಂದರ್ಭದಲ್ಲಿ ಸ್ಮರಿಸಿದರು.

ಇದೇ ಸಂದರ್ಭದಲ್ಲಿ ಮಾಜಿ ಸಚಿವ ಡಾ. ಎಂ. ಶಂಕರನಾಯ್ಕ, ಮಾಜಿ ಸಚಿವ ರಾಜವರ್ಧನ್, ವಿಧಾನಸಭೆಯ ಮಾಜಿ ಸದಸ್ಯರುಗಳಾದ ಬಿರಾದಾರ ಮಲ್ಲನಗೌಡ ದವಲತ್‌ರಾಯ್, ಪಟ್ಟಮಕ್ಕಿ ರತ್ನಾಕರ, ಯು. ಭೂಪತಿ, ವಿ. ಪಾಪಣ್ಣ ಅವರುಗಳನ್ನು ಮುಖ್ಯಮಂತ್ರಿಗಳು ಸ್ಮರಿಸಿದರು.

ಜಮ್ಮು ಮತ್ತು ಕಾಶ್ಮೀರದ ಗುರೇಜ್‌ನಲ್ಲಿ ಇತ್ತೀಚೆಗೆ ಹಿಮಪಾತಕ್ಕೆ ಸಿಲುಕಿ ಪ್ರಾಣತೆತ್ತ ಇಪ್ಪತ್ತು ಮಂದಿ ಯೋಧರನ್ನು ಹಾಗೂ ಕರ್ನಾಟಕದ ಹಾಸನ ಜಿಲ್ಲೆಯ ಶಾಂತಿಗ್ರಾಮ ಹೋಬಳಿಯ ದೇವಿಗ್ರಾಮದ ಡಿ.ಪಿ. ಸಂದೀಪ್‌ಕುಮಾರ್ ಅವರುಗಳನ್ನು ಸ್ಮರಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿದ ಮುಖ್ಯಮಂತ್ರಿಗಳು, ಹುತಾತ್ಮರಾದ ಎಲ್ಲಾ ಯೋಧರ ಕುಟುಂಬ ವರ್ಗದವರಿಗೆ ದು:ಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿದರು.

ಕೊನೆಯಲ್ಲಿ ಅಗಲಿದ ಗಣ್ಯರಿಗೆ ಎರಡು ನಿಮಿಷದ ಮೌನವನ್ನು ಆಚರಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಿ ಸದನವನ್ನು ನಾಳೆಗೆ ಮುಂದೂಡಲಾಯಿತು.

ಎಸ್‌ಎಂ:ಎಂಆರ್‌ಎಂ:ಜೆಪಿಆರ್.